ಏನೂ ಮಾಡುತ್ತಿಲ್ಲ. ನಾವು ಇದಕ್ಕಾಗಿ ೫೫ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಒಟ್ಟು ೫೫ ಕೋಟಿ ೧೯ ಲಕ್ಷ ರೂಪಾಯಿಗಳನ್ನು ಈ ಒಂದು ಅತಿವೃಷ್ಟಿಗೆ ಬಿಡುಗಡೆ ಮಾಡಿದ್ದೇವೆ. ಇನ್ನು ಜಿಲ್ಲಾಧಿಕಾರಿಗಳ ಹತ್ತಿರ ೧ ಕೋಟಿ ೯೦ ಲಕ್ಷ ರೂಪಾಯಿಗಳ ಹಣ ಇದೆ. ಅಲ್ಲಿ ಯಾವ ಯಾವ ಮಹತ್ವದ ಕೆಲಸಕಾರ್ಯಗಳು ಇವೆ, ಅದನ್ನು ತುರ್ತಾಗಿ ಕೈಗೆತ್ತಿಕೊಳ್ಳಬೇಕು. ಅಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಇರುವಂತಹದ್ದು ಅವರು ಸೂಚನೆಯನ್ನು ಕೊಟ್ಟ ಪ್ರಕಾರ ಮಾಡುವಂತೆ ನಾವು ನೋಡಿ ಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು : ಪ್ರಶ್ನೋತ್ತರ ಕಾಲದಲ್ಲಿ ಈ ತರಹ ಮಾಡುವುದಕ್ಕೆ ಬರುವುದಿಲ್ಲ. ಬೇರೆ ಸೂಚನೆಯನ್ನು ಕೊಡಿ ಆಗ ಅವಕಾಶವನ್ನು ಕೊಡುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜು : ಈ ವಿಚಾರದಲ್ಲಿ ಸದನಕ್ಕೆ ನಾವು ಸತ್ಯವನ್ನು ಹೇಳುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು : ಮಾನ್ಯ ಎಂ.ಪಿ. ಕುಮಾರಸ್ವಾಮಿಯವರನ್ನು ನಾನು ಕರೆದಿದ್ದೇನೆ. ಈ ಪ್ರಶ್ನೆ ಮುಗಿದಿದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಜಿ.ಬೋಪಯ್ಯ, ಶ್ರೀ ಹೆಚ್. ಡಿ ಬಸವರಾಜು, ಶ್ರೀ ಬಿ.ಎ. ಜೀವಿಜಯರವರು ಸದನದ ಬಾವಿಗೆ ಬಂದರು)

ಅಧ್ಯಕ್ಷರು : ನೀವು ಈ ರೀತಿ ಮಾಡಿದರೆ ಹೇಗೆ ? ಗಲಾಟೆ ಮಾಡಬೇಡಿ. ಶ್ರೀ ಬಸವರಾಜ್ ನೀವುಗಳು ವೆಲ್‌ಗೆ ಬರಬಾರದಾಗಿತ್ತು, ಪ್ರಶ್ನೋತ್ತರ ಕಾಲದಲ್ಲಿ ಉಪ ಪ್ರಶ್ನೆಗಳನ್ನು ಒಂದೋ ಎರಡೋ ಕೇಳಬೇಕಾಗುತ್ತದೆ, ಅದನ್ನು ಬಿಟ್ಟು ಈ ರೀತಿ ಮಾಡಿದರೆ ಹೇಗೆ ನೀವು? ಬೋಪಯ್ಯನವರೇ ಈಗ ಜಗದೀಶ್ ಶೆಟ್ಟರ್‌ರವರು ನಿಮ್ಮ ಭಾಗಕ್ಕೆ ಸೇರಿದ ಮಂತ್ರಿಗಳು, ನೀವು ಹೋಗಿ ಕುಳಿತುಕೊಂಡು ಮಾತನಾಡಿ ಪರಿಹಾರ ಮಾಡಕೊಳ್ಳಬಹುದು. ತಾವು ಈ ರೀತಿ ಮಾಡಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಪ್ರಶ್ನೋತ್ತರ ಕಾಲದಲ್ಲಿ ವಿವರವಾದ ಚರ್ಚೆಗೆ ಅವಕಾಶವಿಲ್ಲ, ದಯಮಾಡಿ ನೀವು ನಿಮ್ಮ ಸ್ಥಳಗಳಿಗೆ ಹೋಗಿ, ಬೇರೆ ಯಾವುದಾದರೂ ಒಂದು ರೂಪದಲ್ಲಿ ನೀವು ಸೂಚನೆ ಕೊಡಿ. ಚರ್ಚೆಗೆ ಅವಕಾಶ ಕೊಡುತ್ತೇನೆ. ಆದರೆ ನೀವು ಪ್ರಶ್ನೋತ್ತರ ಕಾಲದಲ್ಲಿ ಎಲ್ಲಾ ವಿಚಾರಗಳನ್ನು ಚರ್ಚೆ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ, ದಯಮಾಡಿ ನಿಮ್ಮ ಸ್ಥಳಗಳಿಗೆ ಹೋಗಿ.

(ಗೊಂದಲ)

ಅಧ್ಯಕ್ಷರು : ಆಯಿತು, ನಿಮ್ಮ ಸ್ಥಳಗಳಿಗೆ ಹೋಗಿ ದಯಮಾಡಿ. ಈಗ ಜಗದೀಶ ಶೆಟ್ಟರ್ ರವರೇ ನೋಡಿ ನಮ್ಮ ಮಾತಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲವೆಂದು ಮಾನ್ಯ ಶಾಸಕರು ಹೇಳುತ್ತಿದ್ದಾರೆ, ನೀವು ಅದರ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕು.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ಶಾಸಕರ ನೇತೃತ್ವದ ಅಧ್ಯಕ್ಷ ಸಮಿತಿ ಆ ದಿನ ಅಸ್ತಿತ್ವದಲ್ಲಿರಲಿಲ್ಲವೇ? ಆವತ್ತು ಆ ಶಾಸಕರ ಕಮಿಟಿ ಅಸ್ತಿತ್ವದಲ್ಲಿರದಿದ್ದರೆ ಇವರು ಹೇಳುವುದು ಕರೆಕ್ಟ್, ಆ ದಿವಸ ಇತ್ತು ಎಂದು ನೀವು ಒಪ್ಪಿದ್ದೀರಿ.

ಅಧ್ಯಕ್ಷರು : ರೆಡ್ಡಿಯವರೇ, ಇದು ಒಂದು ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ, ಪ್ರಶ್ನೋತ್ತರ ಕಾಲದಲ್ಲಿ ದಯಮಾಡಿ ಸಾಧ್ಯವಿಲ್ಲ. ಇದು ಪಾಲಿಸಿ ಮ್ಯಾಟರ್ ಆಗಿದೆ. ನೀವೆಲ್ಲರೂ ಸಹ ಮಾತನಾಡಬೇಕಾದರೆ ಒಂದು ಚರ್ಚೆಗೆ ಅವಕಾಶ ಮಾಡಕೊಡೋಣ. ಪ್ರಶ್ನೋತ್ತರ ಕಾಲದಲ್ಲಿ ಈ ರೀತಿ ಮಾಡಿದರೆ ಹೇಗೆ? ಮುಂದೆ ಆ ಬಗ್ಗೆ ಚರ್ಚೆ ಮಾಡೋಣ, ಈಗ ಪ್ರಶ್ನೋತ್ತರ ನಡೆಸಲು ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇದು ಜಾರಿಗೆ ಬಂದದ್ದು ೧೦.೧೦.೨೦೦೬, ಇದನ್ನು ತೆಗೆದುಕೊಂಡಿದ್ದು ೧೬.೯.೨೦೦೫.

(ಗೊಂದಲ)

ಶ್ರೀ ಧರಂಸಿಂಗ್ : ನಾನು ಜಿಲ್ಲಾಧಿಕಾರಿಗಳಿಗೆ ಡೈರೆಕ್ಷನ್ಸ್ ಕೊಡುತ್ತೇನೆ, ಏನೇನು ಆಗಿದೆ ಎಂಬುದನ್ನು ಕೊಟ್ಟರೆ ಸಾಕು, ಅದಕ್ಕೆ ಸಮಯ ಬೇಕು, ಅರ್ಧಗಂಟೆಗಳ ಕಾಲ ಚರ್ಚೆಯಾಗಲಿ, ಇವತ್ತು ಜೀವಿಜಯ, ಬಸವರಾಜು ಎಲ್ಲರೂ ಕೂಡಿ ಪಕ್ಷ ಭೇದ ಮರೆತು ಇವತ್ತಿನ ದಿವಸ ಆ ಕೊಡಗು ಜಿಲ್ಲೆಯಲ್ಲಿ ಆದಂಥ ಕೆಲಸ ಕಾರ್ಯಗಳ ಬಗ್ಗೆ ಜಿಲ್ಲಾಧಿಕಾರಿಗಳ ಬಗ್ಗೆ ದೂರು ಕೊಡುತ್ತಿದ್ದಾರೆ, ಇವತ್ತು ಸ್ಪಷ್ಟವಾಗಿ ಜಿಲ್ಲಾಧಿಕಾರಿಗಳಿಗೆ ಕಂದಾಯ ಸಚಿವರು ಆದೇಶ ಕೊಟ್ಟು ಎಲ್ಲೆಲ್ಲಿ ಏನೇನು ತಪ್ಪಾಗಿದೆ ಅದನ್ನು ಸರಿಪಡಿಸಲು ಆದೇಶಿಸಬೇಕು.

(ಗೊಂದಲ)

ಮಾನ್ಯ ಸದಸ್ಯರೊಬ್ಬರು : ಕೊಡಗು ಒಂದೇ ಅಲ್ಲ, ಮಲೆನಾಡು ಎಲ್ಲಾ ಅಭಿವೃದ್ಧಿ ಕ್ಷೇತ್ರಗಳಲ್ಲಿಯೂ ಮಳೆ ಜಾಸ್ತಿಯಾಗಿದೆ. ಕೊಡಗು ಒಂದೇ ಅಲ್ಲ, ಮಲೆನಾಡು, ಶಿವಮೊಗ್ಗ ಎಲ್ಲವನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ನೋಡಿ ನೀವು ವೆಲ್‌ನೊಳಗೆ ಬಂದು ಬಿಟ್ಟಿದ್ದೀರಿ, ಸುಮ್ಮನೆ ನಿಂತುಕೊಳ್ಳಿ, ಸಚಿವರು ಉತ್ತರ ಕೊಡುತ್ತಾರೆ.

ಮಾನ್ಯ ಸದಸ್ಯರು : ಅಧ್ಯಕ್ಷರೇ, ಆ ಭಾಗದ ಜನರೆಲ್ಲರ ಕಷ್ಟ ಅದು. ಆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಈಗ ಎಲ್ಲರೂ ಹೀಗೆ ನಿಂತುಕೊಂಡು ಮಾತನಾಡಿದರೆ ಹೇಗೆ ? ಪ್ರಶ್ನೋತ್ತರ ಕಾಲದಲ್ಲಿ ಈ ರೀತಿ ಆದರೆ ಉತ್ತರ ಕೊಡಿಸುವುದು ಹೇಗೆ ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಉಸ್ತುವಾರಿ ಸಚಿವರು ಇದರ ಬಗ್ಗೆ ಗಮನ ಕೊಡಬೇಕು, ಇದು ಸರಿಯಲ್ಲ, ಹಾಗಾಗಿ ನಾನು ಸಹ ಹೆಚ್.ಡಿ. ಬಸವರಾಜು ಅವರಿಗೆ ಬೆಂಬಲ ಕೊಡುತ್ತೇನೆ. (ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸಹ ಬಾವಿಯೊಳಗೆ ಪ್ರವೇಶಿಸಿ ಧರಣಿ ನಿರತರಾದರು.)

ಶ್ರೀ ಬಿ.ಶಿವರಾಂ : ಹೀಗೆ ಆದರೆ ನಾವು ಧರಣಿ ಮಾಡಬೇಕಾಗುತ್ತದೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ಕಂದಾಯ ಸಚಿವರು ಉತ್ತರ ಕೊಡುತ್ತಾರೆ. ಜಗದೀಶ್ ಶೆಟ್ಟರ್‌ರವರೇ ದಯಮಾಡಿ ಉತ್ತರ ಕೊಡಿ. ಅನೇಕ ಕಡೆಗಳಲ್ಲಿ ಜಿಲ್ಲಾಧಿಕಾರಿಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ. ಕೆಲವು ಜಿಲ್ಲಾಧಿಕಾರಿಗಳಿಗೆ ಒಂದು ರೀತಿಯ ಸರ್ವಾಧಿಕಾರದ ಮನೋಭಾವ. ಇನ್ನು

ಕೆಲವು ಜಿಲ್ಲಾಧಿಕಾರಿಗಳಿಗೆ. ನಾನು ಒಂದು ಸಾರಿ ಮಾತನಾಡಿದ್ದೆ. ದಯಮಾಡಿ ಕೇಳಿ, ಈಗ ನೀವು ೧೦.೦೦ ಕೋಟಿ ರೂ. ಗಳನ್ನು ಕೊಡುತ್ತೀರಿ, ಆ ಹಣದಲ್ಲಿ ಆತನ ಕಮಿಷನ್ ಏನು ಎನ್ನುವುದೆಲ್ಲಾ ಆಗುತ್ತಿದೆ. ನಾಚಿಕೆಗೇಡಿನ ವಿಚಾರ, ಒಬ್ಬ Disrict Collector ರಿಂದ ಈ ರೀತಿಯೆಲ್ಲಾ ಆಗುತ್ತಿದೆ. ಜನ ಮಾತನಾಡುವುದನ್ನು ಕೇಳಿದರೆ ಅಸಹ್ಯವಾಗುತ್ತದೆ. ಆದ್ದರಿಂದ ನೀವು ಕಂದಾಯ ಸಚಿವರು ನಿಮ್ಮ ಜಿಲ್ಲಾಧಿಕಾರಿಗಳಿಗೆ ಸರಿಯಾದ ರೀತಿಯಲ್ಲಿ ಸೂಚನೆ ಕೊಡಬೇಕು ಮತ್ತು ಶಾಸಕರು ಕೇಳುತ್ತಿರುವಂತೆ ಅವರ ಕೆಲಸಗಳನ್ನು ಸರಿಯದ ರೀತಿಯಲ್ಲಿ ತೆಗೆದುಕೊಳ್ಳಬೇಕು. ನಿಮ್ಮ ಜಿಲ್ಲಾಧಿಕಾರಿಗಳು ಶಾಸಕರಿಗೆ ಸರಿಯಾದ ರೀತಿಯಲ್ಲಿ ಮಾನ್ಯತೆ ಕೊಟ್ಟು ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕು. ಒಂದು ವೇಳೆ ಆ ಕೆಲಸ ಕಾರ್ಯಗಳೇನಾದರೂ ಆಗದೆ ಲೋಪವಾಗಿದ್ದರೆ ಶಾಸಕರು ಹೇಳಿದಂತೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಆ ರೀತಿ ಮಾಡಿಸುವುದನ್ನು ಬಿಟ್ಟು ಅವರ ಇಷ್ಟ ಬಂದ ರೀತಿಯಲ್ಲಿ ಅವರು ಮಾಡುವುದು, ಇವರು ಇಷ್ಟ ಬಂದ ರೀತಿಯಲ್ಲಿ ಇವರು ಕೇಳುವುದು, ಏನು ವ್ಯವಸ್ಥೆ ಇದು. ಆಯಿತು, ಇದಕ್ಕೆ ಉತ್ತರ ಹೇಳಿ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರಾದ ಶ್ರೀ ನೆ.ಲ. ನರೇಂದ್ರಬಾಬು, ಎಂ.ಟಿ. ಬಿ ನಾಗರಾಜು ಮತ್ತು ಶ್ರೀ ಜೆ. ನರಸಿಂಹಸ್ವಾಮಿಯವರು ಸದನದ ಬಾವಿಗಿಳಿದು ಧರಣಿ ನಿರತರಾಗಿದ್ದರು.)

ಶ್ರಿ ಜಗದೀಶ್ ಶೆಟ್ಟರ್ : ಮಾನ್ಯ ಸಭಾಧ್ಯಕ್ಷರು ಏನು ಸಲಹೆ ಸೂಚನೆಯನ್ನು ಕೊಟ್ಟಿದ್ದೀರಿ. particularly ಈ ಒಂದು ಕೊಡಗು ಜಿಲ್ಲೆಯ ಜಿಲ್ಲಾಧಿಕಾರಿಗಳ ಬಗ್ಗೆ ನಮ್ಮ ಸದಸ್ಯರುಗಳೇನು ಭಾವನೆಯನ್ನು ವ್ಯಕ್ತಪಡಿಸಿದ್ದಾರೆ ಮತ್ತು ಎಲ್ಲಿ ತಪ್ಪುಗಳಾಗಿವೆ, ಅಲ್ಲಿ ಶಾಸಕರನ್ನು ಕರೆದುಕೊಂಡು ಹೋಗಿ ಅವರ ಸಮಕ್ಷಮವೇ ಆ ತಪ್ಪುಗಳನ್ನು ಸರಿಮಾಡುವಂಥ ಕೆಲಸ ಹಾಗೂ ಬೇರೆ ಬೇರೆ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಏನು ತಪ್ಪುಗಳನ್ನು ಮಾಡಿದ್ದಾರೆ ಅದನ್ನು ಸರಿಪಡಿಸಲಿಕ್ಕೆ ತಾವು ಕೊಟ್ಟಿರುವ ಸಲಹೆ ಮೇರೆಗೆ ಎಲ್ಲಾ ಜಿಲ್ಲೆಗಳಲ್ಲಿಯೂ ಸಹ ನಾನು ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು : ದಯಮಾಡಿ ಈಗ ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ, ಕಂದಾಯ ಸಚಿವರೊಂದಿಗೆ ತಾವೆಲ್ಲಾ ಕುಳಿತು ಮಾತನಾಡಿ ಸಚಿವರಿಗೆ ನಿಮ್ಮ ವಿವರಗಳನ್ನು ಕೊಟ್ಟು ಆ ತಪ್ಪುಗಳನ್ನು ಸರಿಪಡಿಸಲಿಕ್ಕೆ ಕಾಲಾವಕಾಶ ಕೊಡಿ, ಆಮೇಲೆ ಮುಂದಿನ ವಿಚಾರ.

ಈಗ ಶ್ರೀ ಎಂ.ಪಿ. ಕುಮಾರಸ್ವಾಮಿ ಪ್ರಶ್ನೆ ಕೇಳಿ,